**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಮಾಡಿಸಲಾಯಿತು.**

**ದಿ:21-01-2025**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವೈ ಕೆ ವಕೀಲರಿಂದ**

ನಾನು 6 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನಾನು ಸುಮಾರು 15 ವರ್ಷಗಳಿಂದ ಶುಂಠಿ ವ್ಯಾಪಾರ ಸಹ ಮಾಡುತ್ತೇನೆ. ನಾನು ಯಾವುದೇ ಅಂಗಡಿ ಮಾಡಿಕೊಂಡಿರುವುದಿಲ್ಲ. ನಾನು ತೆರಿಗೆ ಪಾವತಿದಾರನಾಗಿರುವುದಿಲ್ಲ. ಆರೋಪಿ ನನ್ನ ಸ್ನೇಹಿತ ಭಾಸ್ಕರ್ ರವರಿಂದ ಪರಿಚಯ ಆಗಿರುತ್ತಾರೆ. ಭಾಸ್ಕರ್ ರವರು ಮಾವಿನಹಳ್ಳಿ ಗ್ರಾಮದವರು ಇರುತ್ತಾರೆ. ಭಾಸ್ಕರ್ ರವರು ಸುಮಾರು 15 ವರ್ಷಗಳಿಂದ ಪರಿಚಯ ಇರುತ್ತಾರೆ. ಅವರು ಶನಿವಾರಸಂತೆಯಲ್ಲಿ ಯಶಸ್ವಿನಿ ಮಂಟಪದ ಬಳಿ ಹೋಟೆಲ್ ಇಟ್ಟುಕೊಂಡಿರುತ್ತಾರೆ.

ಆರೋಪಿ ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ. ಅವರು ಐದು ವರ್ಷಗಳಿಂದ ಪರಿಚಯ ಇರುತ್ತಾರೆ. ನಾನು ಅವರ ಮನೆಗೆ ಹತ್ತು ಬಾರಿ ಹೋಗಿರುತ್ತೇನೆ. ಭಾಸ್ಕರ್ ರವರ ಜೊತೆ ಅವರ ಮನೆಗೆ ಹೋಗಿರುತ್ತೇನೆ. ಆರೋಪಿ ಸಹ ನಮ್ಮ ಮನೆಗೆ ಸುಮಾರು ಮೂರು ಬಾರಿ ಬಂದಿರುತ್ತಾರೆ. ಆದರೆ ದಿನಾಂಕ ನೆನಪಿಲ್ಲ. ಆರೋಪಿ ವ್ಯವಸಾಯ ಮಾಡುತ್ತಾರೆ ಎಂದು ನನಗೆ ತಿಳಿಸಿದ್ದರು. ಅವರ ಮನೆಯಲ್ಲಿ ಗಂಡ, ಹೆಂಡತಿ, ಮಕ್ಕಳು ಮತ್ತು ತಾಯಿ ಇರುತ್ತಾರೆ. ಈಗ ಅವರ ತಾಯಿ ಮರಣ ಹೊಂದಿರುತ್ತಾರೆ. ಶನಿವಾರಸಂತೆಯಿಂದ ಆರೋಪಿ ಮನೆ 3 ರಿಂದ 4 ಕಿ ಮೀ ಇರುತ್ತದೆ. ಆತನ ಊರು ಕೊಳತೂರು ಗ್ರಾಮ ಆಗಿರುತ್ತದೆ.

ಆರೋಪಿ ತಮ್ಮ ಮನೆಯಲ್ಲಿ ಸ್ವಲ್ಪ ಕಷ್ಟ ಇದೆ ಎಂದು ಹೇಳಿ ಹಣ ಕೇಳಿರುತ್ತಾರೆ. ಶನಿವಾರಸಂತೆಯಲ್ಲಿ ಹಣ ಕೇಳಿರುತ್ತಾರೆ. ಆಗ ನಾನು ಮತ್ತು ಆರೋಪಿ ಮಾತ್ರ ಇದ್ದೆವು. ನಾನು ಶನಿವಾರಸಂತೆಯಲ್ಲಿ ವಾಸವಿರುವುದಿಲ್ಲ. ಆರೋಪಿ ಮೂರು ಲಕ್ಷ ಹಣ ಕೇಳಿರುತ್ತಾರೆ. ಆರೋಪಿ 02-05-2022 ರಂದು ಹಣ ಕೇಳಿರುತ್ತಾರೆ. ನಾನು 10 ದಿನ ಬಿಟ್ಟು ನಮ್ಮ ಮನೆಯಲ್ಲಿ ಹಣ ನೀಡಿರುತ್ತೇನೆ. ಹಣ ನೀಡುವ ಕಾಲಕ್ಕೆ ನನ್ನ ತಾಯಿ ಮತ್ತು ಸಹೋದರ ಇದ್ದರು. ಆರೋಪಿ ಒಬ್ಬರೇ ಬಂದಿದ್ದರು. ಮೂರು ಲಕ್ಷ ಹಣ ಕೃಷಿ ಮಾಡಿದ ಲಾಭದಿಂದ ಬಂದಿರುತ್ತದೆ. ನನಗೆ 15 ಎಕರೆ ಕಾಫಿ ತೋಟ ಇರುತ್ತದೆ. ಅದರ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ.

ಮೇ 2022 ರಲ್ಲಿ ಆರೋಪಿಗೆ ಹಣ ನೀಡಿರುವ ಬಗ್ಗೆ ನೋಟೀಸ್ ನಲ್ಲಿ ಮತ್ತು ಪಿರ್ಯಾದಿಯಲ್ಲಿ ತಿಳಿಸಿರುತ್ತೇನೆ. ಆರೋಪಿ ಯಾವಾಗ ಹಣ ಕೇಳಿದ್ದರು ಎಂದು ನನ್ನ ನೋಟೀಸ್ ನಲ್ಲಿ ಮತ್ತು ಪಿರ್ಯಾದಿಯಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ದಿಃ 06-08-2022 ರಂದು ನಿಪಿ-1 ಚೆಕ್ ನೀಡಿರುತ್ತಾರೆ. ಅದಕ್ಕೂ ಪೂರ್ವದಲ್ಲಿ ಹಣ ನೀಡಿದ ಹತ್ತು ದಿನಗಳ ನಂತರ ಸಾಕಷ್ಟು ಬಾರಿ ಸಾಲ ವಾಪಸ್ಸು ನೀಡುವಂತೆ ಆರೋಪಿಯನ್ನು ಕೇಳಿರುತ್ತೇನೆ. ನನ್ನ ಪಿರ್ಯಾದಿಯಲ್ಲಿ ಆರೋಪಿ ಆಗಸ್ಟ್ ತಿಂಗಳಲ್ಲಿ ಹಣ ವಾಪಸ್ಸು ನೀಡುತ್ತೇನೆ ಎಂದು ತಿಳಿಸಿರುತ್ತಾರೆ ಎಂದು ನನ್ನ ಪಿರ್ಯಾದಿಯಲ್ಲಿ ನಮೂದಿಸಿರುವುದಿಲ್ಲ. ಪಿರ್ಯಾದಿಯನ್ನು ದಾಖಲು ಮಾಡಲು ನನ್ನ ವಕೀಲರಿಗೆ ನಾನೇ

ಮಾಹಿತಿ ನೀಡಿರುತ್ತೇನೆ. ನಿಪಿ-1 ಚೆಕ್ಕನ್ನು ಆರೋಪಿ ಶನಿವಾರಸಂತೆ ಬಳಿ ನೀಡಿರುತ್ತಾರೆ. ಹಣ ನೀಡುತ್ತೇನೆ ಎಂದು ಹೇಳಿ ಅವರು ನಿಪಿ-1 ಚೆಕ್ಕನ್ನು ನೀಡಿರುತ್ತಾರೆ. ಆರೋಪಿ ತಮ್ಮ ಮನೆಯಲ್ಲಿ ಚೆಕ್ ನೀಡಿರುತ್ತಾರೆ. ಆ ಸಮಯದಲ್ಲಿ ನಾನು ಮತ್ತು ಆರೋಪಿ ಮಾತ್ರ ಇದ್ದೆವು. ಆರೋಪಿ ದಿಃ 06-08-2022 ರಂದುಚೆಕ್ ನೀಡಿರುತ್ತಾರೆ. ಅದರ ಮರುದಿನ ಬ್ಯಾಂಕ್ ಗೆ ನಗದೀಕರಣಕ್ಕಾಗಿ ಹಾಕಿರುತ್ತೇನೆ. ಆರೋಪಿ ಚೆಕ್ ನೀಡಿರುತ್ತಾರೆ ಎಂದು ಹೇಳುವ ಕಾಲಕ್ಕೆ ವಿಜಯಾ ಬ್ಯಾಂಕ್ ಬ್ಯಾಂಕ್ ಆಫ್ ಬರೋಡಾ ಆಗಿ ವಿಲೀನವಾಗಿತ್ತು ಎಂದರೆ ಸರಿ. ಆ ಸಮಯದಲ್ಲಿ ಹಳೇ ಚೆಕ್ಕುಗಳನ್ನು ಪಡೆದುಕೊಂಡು ಬ್ಯಾಂಕ್ ನಲ್ಲಿ ಬ್ಯಾಂಕ್ ಆಫ್ ಬರೋಡಾ ಚೆಕ್ಕುಗಳನ್ನು ವಿತರಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ, ಆದರೆ ಆರೋಪಿ ನಿಪಿ-1 ಚೆಕ್ಕನ್ನು ನೀಡಿರುತ್ತಾರೆ.

ನಿಪಿ-1 ಚೆಕ್ಕಿನ ಮೇಲೆ ಆರೋಪಿ ಸ್ಥಳದಲ್ಲೇ ಬರೆದು ಸಹಿ ಮಾಡಿಕೊಟ್ಟಿರುತ್ತಾರೆ. ನಿಪಿ-1 ಚೆಕ್ಕಿನಲ್ಲಿ ಹರೀಶ್ ಎಂದು ಬರೆದಿರುವ ಶೈಲಿ ಮತ್ತು ಮೂರು ಲಕ್ಷ ಎಂದು ಬರೆದಿರುವ ಶೈಲಿ ಬೇರೆ ಬೇರೆ ಆಗಿರುತ್ತದೆ ಎಂದರೆ ಸಾಕ್ಷಿ ಒಂದೇ ತರ ಇದ್ದು ಅದನ್ನು ಅವರೇ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಹರೀಶ್ ಗೌಡ ಬಿ ಎಸ್ ಎಂದು ದೊಡ್ಡ ಅಕ್ಷರದಲ್ಲಿ ಇದ್ದು ಮೂರು ಲಕ್ಷ ಎಂದು ಸಣ್ಣ ಅಕ್ಷರದಲ್ಲಿ ಬರೆದಿರುತ್ತಾರೆ ಎಂದರೆ ಸರಿ. ಅವರು ಸಹಿ ಮಾಡಿದ ಶಾಹಿ ಮತ್ತು ಬರೆದಿರುವ ಶಾಹಿ ಬೇರೆ ಇರುತ್ತದೆ ಎಂದರೆ ಸರಿ. ಸಾಕ್ಷಿ ಎರಡು ಪೆನ್ನುಗಳನ್ನು ಉಪಯೋಗಿಸಿರುತ್ತಾರೆ ಎಂದು ನುಡಿಯುತ್ತಾರೆ. ಚೆಕ್ಕಿನಲ್ಲಿ ನಮಗೆ ಬೇಕಾಗಿರುವ ರೀತಿಯಲ್ಲಿ ಬೇರೆಯವರ ಬಳಿ

ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಿಃ 06-08-2022 ರಂದು ವಿಜಯಾ ಬ್ಯಾಂಕ್ ಅಸ್ಥಿತ್ವದಲ್ಲಿ ಇರಲಿಲ್ಲ ಎಂದರೆ ಸಾಕ್ಷಿ ಆರೋಪಿ ನಿಪಿ-1 ಚೆಕ್ಕನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ಚೆಕ್ಕು 2018-19 ರ ಚೆಕ್ಕಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ನಿಪಿ-1 ಚೆಕ್ಕಿನಲ್ಲಿ ಯಾವುದೇ ಬರವಣಿಗೆ ಮಾಡಿರುವುದಿಲ್ಲ ಮತ್ತು ನಿಪಿ-1 ರಲ್ಲಿರುವ ಬರವಣಿಗೆ ಅವರದ್ದಲ್ಲ ಎಂದರೆ ಸರಿಯಲ್ಲ.

ನಾನು ಆರೋಪಿಗೆ ಕಳುಹಿಸಿದ ನೋಟೀಸ್ ಗೆ ಮರು ಉತ್ತರ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಬೇಲೂರು ತಾಲ್ಲೂಕು, ಚೀಕನಹಳ್ಳಿ ಮತ್ತು ಸಕಲೇಶಪುರ ತಾಲ್ಲೂಕು, ಬಾಳ್ಳುಗೋಡು ಹೋಬಳಿ, ಕಲ್ಲಹಳ್ಳಿಯಲ್ಲಿ 15 ಎಕರೆ ಜಮೀನು ಇರುತ್ತದೆ. ನನ್ನ ಹೆಸರಿನಲ್ಲಿ ಸ್ವಲ್ಪ ಜಮೀನು ಮತ್ತು ನನ್ನ ಮತ್ತು ನನ್ನ ಸಹೋದರನ ಜಂಟಿ ಹೆಸರಿನಲ್ಲಿ ಸ್ವಲ್ಪ ಜಮೀನು ಇರುತ್ತದೆ. ಅವುಗಳ ಸರ್ವೆ ನಂಬರ್ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು.**
**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**